# ದೇಶದ ಬೆನ್ನೆಲುಬು ಕೃಷಿ ವಲಯಕ್ಕೆ ಹಿಂದಿರುಗಲಿ

## ಮುಜುಂಗಾವುನಲ್ಲಿ 'ಕೃಷಿ ಉತ್ಸವ-2014' ಉದ್ಘಾಟಿಸಿ ಶಾಸಕ ಅಬ್ದುಲ್ ರಝಾಕ್

■ ಪ್ರದೀಪ್ ಬೇಕಲ್

ಚಿತ್ರಗಳು: ಅಖಿಲೇಶ್ ನಗುಮುಗಂ



ಕಳಸಕ್ಕೆ ಭತ್ತ ಸುರಿದು 'ಕೃಷಿ ಉತ್ಸವ'ವನ್ನು ಶಾಸಕ ಪಿ.ಬಿ. ಅಬ್ದುಲ್ ರಝಾಕ್ ಉದ್ಘಾಟಿಸಿದರು.

ಮುಜುಂಗಾವು, ಡಿ. 27: ಕೃಷಿ ಪ್ರಧಾನವಾದ ಈ ದೇಶದಲ್ಲಿ ಕೃಷಿಯೇ ನಮ್ಮ ಬದುಕು. ಕೃಷಿ ಇಲ್ಲದೆ ಬದುಕಿಲ್ಲ. ಆದರೆ ಕೃಷಿ ಲಾಭದಾಯಕವಲ್ಲ ಎಂಬ ಮನೋಭಾವದಿಂದಾಗಿ ಕೃಷಿ ಕ್ಷೇತ್ರದಿಂದ ಪಲಾಯನ ಮಾಡುತ್ತಿರುವುದನ್ನು ಇಂದು ಗಮನಿಸಬಹುದು. ಇದು ಹೀಗೇ ಮುಂದುವರಿದರೆ ಒಂದು ದಿನ ಅನ್ನಕ್ಕಾಗಿ ಪರದಾಡಬೇಕಾದೀತು. ಇಂತಹ ಪರಿಸ್ಥಿತಿಯಿಂದ ಪಾರಾಗಲು ಮತ್ತೆ ನಾವು ಕೃಷಿ ವಲಯಕ್ಕೆ ಹಿಂದಿರುಗಬೇಕು. ಈ ಮೂಲಕ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ಮಂಜೇಶ್ವರ ಶಾಸಕ ಪಿ.ಬಿ. ಅಬ್ದುಲ್ ರಝಾಕ್ ಹೇಳಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕುಂಬಳೆ-ಕಾಸರಗೋಡು, ಮುಜುಂಗಾವಿನ ಶ್ರೀ ಭಾರತೀ ವಿದ್ಯಾಪೀಠ, ಮುಜುಂಗಾವು ಶ್ರೀ ಪಾರ್ಥಸಾರಥಿ ದೇವಸ್ಥಾನ, ಕೃಷಿ ಉತ್ಸವ ವ್ಯವಸ್ಥಾಪನಾ ಸಮಿತಿ ಕುಂಬಳೆ, ಪ್ರಗತಿಬಂಧು ಜ್ಞಾನವಿಕಾಸ ಸ್ವಸಹಾಯ ಸಂಘಗಳ ಒಕ್ಕೂಟ, ಜನಜಾಗೃತಿ ವೇದಿಕೆ ಕುಂಬಳೆ-ಕಾಸರಗೋಡು, ಕೃಷಿ ಹಾಗೂ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಪದ್ಮಭೂಷಣ ಕರ್ನಾಟಕ ರತ್ನ ಧರ್ಮಾಧಿಕಾರಿ ಡಾ| ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ವೀ. ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ಮುಜುಂಗಾವು ಶ್ರೀ ಭಾರತೀ ವಿದ್ಯಾಪೀಠ ಶಾಲಾ ಆವರಣದಲ್ಲಿ ಆಯೋಜಿಸಿದ ಎರಡು ದಿನಗಳ 'ಕೃಷಿ ಉತ್ಸವ'ವನ್ನು ಕಳಸಕ್ಕೆ ಭತ್ತ ಸುರಿದು ಉದ್ಘಾಟಿಸಿ ಅವರು ಮಾತನಾಡಿದರು.

### ಮೌಲ್ಯವರ್ಧನೆಯಾಗಲಿ: ಡಾ| ಕೆ.ಬಿ. ಹೆಬ್ಬಾರ್

ದೇಶದ ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಕೆ ಬಹಳ ಕಡಿಮೆ. ಕೃಷಿ ಕ್ಷೇತ್ರವನ್ನು ಉಳಿಸಿಕೊಳ್ಳಬೇಕಾದರೆ ಇಂದಿನ ಪರಿಸ್ಥಿತಿಯಲ್ಲಿ ತಂತ್ರಜ್ಞಾನವನ್ನು ಹೆಚ್ಚು ಬಳಸಿಕೊಂಡು ಉತ್ಪಾದನೆಯನ್ನು ಹೆಚ್ಚಿಸಬೇಕು. ಇಂದು ವಿದೇಶಕ್ಕೆ ಹೋಲಿಸಿದರೆ ನಮ್ಮ ದೇಶದಲ್ಲಿ ಮೌಲ್ಯವರ್ಧನೆಯಾಗುತ್ತಿಲ್ಲ ಎಂದು ಸಿಪಿಸಿಆರ್‌ಐಯ ಡಾ| ಕೆ.ಬಿ. ಹೆಬ್ಬಾರ್ ಹೇಳಿದರು.

ಅವರು ದೀಪ ಬೆಳಗಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಬದುಕು ಸಾಗಿಸಲು ಮೌಲ್ಯವರ್ಧನೆ ಅಗತ್ಯವಿದೆ. ಕೃಷಿಕರಿಗೆ ಮಾಹಿತಿ ನೀಡುವಲ್ಲಿ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಶ್ಲಾಘನೀಯ ಕೆಲಸ ಮಾಡುತ್ತಿದೆ. ಇಂತಹ ಕೃಷಿ ಉತ್ಸವ, ಮೇಳಗಳು ಹೆಚ್ಚೆಚ್ಚು ನಡೆಯಬೇಕೆಂದರು.

### ಕಣ್ಮರೆಯುತ್ತ ಕೃಷಿ ಸಂಸ್ಕೃತಿ: ಡಾ| ಎಲ್.ಎಚ್. ಮಂಜುನಾಥ್

ಕಾರವಾರದಿಂದ ಕಣ್ಣೂರುವರೆಗಿನ ಕರಾವಳಿ ಕೃಷಿ ಪ್ರಧಾನ ಪ್ರದೇಶ. ದ.ಕ., ಉಡುಪಿ ಜಿಲ್ಲೆಗಳಲ್ಲಿ ನಿರಂತರವಾಗಿ ಕೃಷಿ ಉತ್ಸವ, ಮೇಳಗಳು ನಡೆಯುತ್ತಿವೆ. ಕಾಸರಗೋಡಿನಲ್ಲಿ ಇದೀಗ ಪ್ರಥಮವಾಗಿ ನಡೆಯುತ್ತಿದೆ. ಕೃಷಿ ಉತ್ಸವ, ಮೇಳಗಳ ಪ್ರಮುಖ ಉದ್ದೇಶ ಕೃಷಿಕರಲ್ಲಿ ಬಂದಿರುವ ನಿರಾಶಾ ಭಾವನೆಯನ್ನು ತೊಲಗಿಸುವುದು. ವಿಜ್ಞಾನಿಗಳ ಸಾಧನೆಗಳನ್ನು ಕ್ರೋಡೀಕರಿಸಿ ಕೃಷಿ ತಂತ್ರಜ್ಞಾನವನ್ನು ತಿಳಿಸುವುದು ಮೊದಲಾದವು. ಕೃಷಿ ಮಾಡುವಂತಹ ಸ್ಥಿತಿ ಇಂದು ಇಲ್ಲ. ಆದಾಯ ಬರುವುದಿಲ್ಲ ಎಂಬ ಮನೋಭಾವ ಕೃಷಿಕರಲ್ಲಿ ಮೂಡಿದೆ. ಕೃಷಿಗೆ ಕಾರ್ಮಿಕರು ಲಭಿಸುವುದಿಲ್ಲ. ಸಹಕಾರ ಲಭಿಸುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕೃಷಿ ಮಾಡಲು ಯಾರೂ ಮುಂದಾಗುವುದಿಲ್ಲ. ಇಂತಹ ಪರಿಸ್ಥಿತಿಯಿಂದ ಪಾರಾಗಲು ಆಧುನಿಕ ತಂತ್ರಜ್ಞಾನವನ್ನು ಕೃಷಿಯಲ್ಲಿ ಬಳಸಬೇಕಾಗುತ್ತದೆ. ಕೃಷಿಯಲ್ಲಿ ಲಾಭ ಇದೆ ಎಂಬ ಭಾವನೆ ಕೃಷಿಕರಲ್ಲಿ ಮೂಡಿಸಬೇಕು. ಇಲ್ಲದಿದ್ದಲ್ಲಿ ದೇಶದಲ್ಲಿ ಕೃಷಿ ಸಂಸ್ಕೃತಿ ಕಣ್ಮರೆಯಾಗುವ ಭಯವಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ| ಎಲ್. ಎಚ್. ಮಂಜುನಾಥ್ ಅವರು ತರಕಾರಿಯಲ್ಲಿ ತಯಾರಿಸಿದ ಗಣಪನ ಕೃತಿ ಅನಾವರಣಗೊಳಿಸಿ ವಸ್ತುಪ್ರದರ್ಶನದ ಉದ್ಘಾಟನೆ ಮತ್ತು ಉತ್ಸವದ ಆಶಯ ಭಾಷಣವನ್ನು ನೆರವೇರಿಸಿದರು.

### ಪರಂಪರಾಗತ ಕೃಷಿ ಉಳಿಯಲಿ: ಪಿ.ಪಿ. ಶ್ಯಾಮಲಾದೇವಿ

ಕಾಸರಗೋಡು ಜಿ.ಪಂ. ಅಧ್ಯಕ್ಷೆ ಪಿ.ಪಿ. ಶ್ಯಾಮಲಾದೇವಿ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಕಾಸರಗೋಡು ಜಿಲ್ಲೆಯನ್ನು ಜೈವಿಕ ಜಿಲ್ಲೆಯಾಗಿ 2 ವರ್ಷಗಳ ಹಿಂದೆ ಘೋಷಿಸಲಾಗಿತ್ತು. ಕೃಷಿ ಸಮೃದ್ಧಿ, ಸಂಸ್ಕೃತಿ, ಪರಂಪರೆಯನ್ನು ಉಳಿಸುವುದು ಇದರ ಉದ್ದೇಶ. ಕೃಷಿಯ ಬಗ್ಗೆ ಯುವ ಜನಾಂಗದಲ್ಲಿ ಅರಿವು ಮೂಡಿಸಲು ಸಾಕಷ್ಟು ಯೋಜನೆಗಳನ್ನು ಜಿ.ಪಂ. ಆಯೋಜಿಸಿದೆ. ಪರಂಪರಾಗತ ಕೃಷಿಯನ್ನು ಉಳಿಸಿಕೊಳ್ಳಬೇಕಾದ ಅಗತ್ಯ ಇದೆ ಎಂದರು.

ಕುಂಬಳೆ ಗ್ರಾ. ಪಂ. ಅಧ್ಯಕ್ಷೆ ತಾಹಿರಾ ಯೂಸುಫ್, ಕುಂಬಳೆ ಬ್ಲಾಕ್ ಪಂ. ಸದಸ್ಯೆ ಸ್ನೇಹಲತಾ ದಿವಾಕರ್, ಕುಂಬಳೆ ಗ್ರಾ.ಪಂ. ಸದಸ್ಯೆ ಅಶ್ವಿನಿ ನಾಣಿಹಿತ್ತಿಲು ಶುಭಹಾರೈಸಿದರು. ಪ್ರಗತಿ ನಿಧಿ ನಿರ್ದೇಶಕ ಸಂಪತ್ ಕುಮಾರ್ ಉಪಸ್ಥಿತರಿದ್ದರು.

ಕೃಷಿ ಉತ್ಸವ ಸಮಿತಿ ಅಧ್ಯಕ್ಷ ಯೋಗೀಶ್ ಕಡಮಣ್ಣಾಯ ಸ್ವಾಗತಿಸಿದರು. ಕುಂಬಳೆ-ಕಾಸರಗೋಡು ವಲಯ ಯೋಜನಾಧಿಕಾರಿ ಸಂಧ್ಯಾ ವಿ. ಶೆಟ್ಟಿ ವಂದಿಸಿದರು. ಮುರಳೀಧರ ಯಾದವ್ ಕಾರ್ಯಕ್ರಮ ನಿರೂಪಿಸಿದರು.

ಕಾರ್ಯಕ್ರಮಕ್ಕೆ ಮುನ್ನ ಅತಿಥಿಗಳನ್ನು ಕೊಂಬು ಕಹಳೆ, ಕಂಬಳದ ಕೋಣಗಳ ಸ್ವಾಗತದೊಂದಿಗೆ ವೇದಿಕೆಗೆ ಕರೆತರಲಾಯಿತು. ಉದ್ಘಾಟನೆ ಬಳಿಕ ತೋಟಗಾರಿಕೆಯಲ್ಲಿ ಮಿಶ್ರಬೆಳೆಗಳು ಹಾಗೂ ಹೈಟೆಕ್ ತರಕಾರಿ ಕೃಷಿ ಎಂಬ ವಿಷಯದಲ್ಲಿ ತಜ್ಞರಿಂದ ವಿಚಾರಗೋಷ್ಠಿ, ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ತಾಲೂಕಿನ 80 ಪ್ರಗತಿಬಂಧು, ಸ್ವಸಹಾಯ ಸಂಘಗಳ ಒಕ್ಕೂಟ ಉದ್ಘಾಟನೆ ಮತ್ತು ಪ್ರಗತಿಯ ಪಾಲುದಾರರೊಂದಿಗೆ ಸಂವಾದ ನಡೆಯಿತು. ಕಾರ್ಯಕ್ರಮದಲ್ಲಿ ಸಾವಿರಾರು ಮಂದಿ ಭಾಗವಹಿಸಿದರು.

## ಇಂದಿನ ಕಾರ್ಯಕ್ರಮ

ಡಿ. 28ರಂದು ಬೆಳಗ್ಗೆ 9ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ, 10ರಿಂದ ಜಾನುವಾರು ಪ್ರದರ್ಶನವನ್ನು ಗೋವಿಂದ ಭಟ್ ಮುಳ್ಳಂಕೊಚ್ಚಿ ಉದ್ಘಾಟಿಸುವರು. ಆ ಬಳಿಕ ಭತ್ತ ಕೃಷಿಯಲ್ಲಿ ಅಧಿಕ ಇಳುವರಿಯ ಮಾರ್ಗೋಪಾಯಗಳು ಮತ್ತು ಇಲಾಖಾ ಸೌಲಭ್ಯ ಕುರಿತಾಗಿ ಡಾ| ಪಿ. ತಿರುಮಲೇಶ್ವರ ಭಟ್, ಅನಿತಾ ಮೆನನ್ ಮಾತನಾಡುವರು. ಮಹಾಲಿಂಗೇಶ್ವರ ಭಟ್, ಪೆರುಮುಂಡ ಶಂಕರನಾರಾಯಣ ಭಟ್ ಅನುಭವ ಹಂಚಿಕೊಳ್ಳುವರು. 11.30ರಿಂದ ಲಾಭದಾಯಕ ಹೈನುಗಾರಿಕೆ ಮತ್ತು ಸಾವಯವ ಕೃಷಿ ಬಗ್ಗೆ ಡಾ| ಜಿ.ಕೆ. ಮಹೇಶ್, ಗಂಗಾಧರ ಭಂಡಾರಿ ಮಾತನಾಡುವರು. ಭಾಸ್ಕರ ನಾಯ್ಕ, ಅಬೂಬಕ್ಕರ್ ಸಿದ್ದಿಕ್ ಅನುಭವ ಹಂಚಿಕೊಳ್ಳುವರು. ಅಪರಾಹ್ನ 2ರಿಂದ ಅಂಗೈಯಲ್ಲಿ ಆರೋಗ್ಯ ಮತ್ತು ಆರ್ಥಿಕ ಸ್ವಾವಲಂಬನೆ ಕುರಿತಾಗಿ ಡಾ| ಸರಿತಾ ಹೆಗ್ಡೆ ಮಾತನಾಡುವರು. ವಿದ್ಯಾ ಗೌರಿ ಮಾರ್ಪನಡ್ಕ ಅನುಭವ ಹಂಚಿಕೊಳ್ಳುವರು.

ಅಪರಾಹ್ನ 3ರಿಂದ ಸಮಾರೋಪ ಸಮಾರಂಭ ನಡೆಯಲಿದೆ. ಯೋಗೀಶ್ ಕಡಮಣ್ಣಾಯ ಅಧ್ಯಕ್ಷತೆ ವಹಿಸುವರು. ಶಾಸಕ ಎನ್.ಎ. ನೆಲ್ಲಿಕುನ್ನು, ಮಹಾವೀರ ಅಜ್ರ, ಥೋಮ್ಸನ್ ಜೋಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸುರೇಶ್ ಕುಮಾರ್ ಶೆಟ್ಟಿ, ಮಂಜುನಾಥ ಆಳ್ವ, ಫರೀದಾ, ರಾಮಚಂದ್ರ ಭಟ್, ಸುಲೋಚನಾ, ಸುಬ್ಬಯ್ಯ ರೈ ಉಪಸ್ಥಿತರಿರುವರು. ಸಂಜೆ 4.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

## ಕೃಷಿ ಉತ್ಸವದ ವಿಶೇಷಗಳು

ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆ, ಶ್ರೀ ಪದ್ಧತಿ ಭತ್ತ ನಾಟಿ ಪ್ರಾತ್ಯಕ್ಷಿಕೆ, ಗುಡಿ ಕೈಗಾರಿಕೆ ಪ್ರಾತ್ಯಕ್ಷಿಕೆ, ಸಾವಯವ ಕೃಷಿ ಪ್ರಾತ್ಯಕ್ಷಿಕೆ, ಮಣ್ಣು ಪರೀಕ್ಷಾ ಪ್ರಾತ್ಯಕ್ಷಿಕೆ, ಆಡು ಸಾಕಣಿಕೆ ಪ್ರಾತ್ಯಕ್ಷಿಕೆ, ಮೊಲ ಸಾಕಣೆ ಪ್ರಾತ್ಯಕ್ಷಿಕೆ, ಮಳೆ ಕೊಯ್ಲು ಪ್ರಾತ್ಯಕ್ಷಿಕೆ, ಕೃಷಿ ಪರಿಕರಗಳ ಪ್ರದರ್ಶನ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಕರಕುಶಲ ವಸ್ತುಗಳ ಪ್ರದರ್ಶನ, ಜಾನುವಾರು, ಶ್ವಾನ ಮತ್ತು ಕುಕ್ಕುಟ ಪ್ರದರ್ಶನ, ಕೃಷಿ ಉತ್ಪನ್ನಗಳ ಪ್ರದರ್ಶನ, ನರ್ಸರಿ ಮಳಿಗೆಗಳು, ಪಶು ಸಂಗೋಪನಾ ತಂತ್ರಜ್ಞಾನಗಳು, ವಿವಿಧ ವಸ್ತು ಪ್ರದರ್ಶನ ಮಳಿಗೆಗಳು, ಯೋಜನೆಯ ಫಲಾನುಭವಿಗಳೊಂದಿಗೆ ಗ್ರಾಮಾಭಿವೃದ್ಧಿ ಯೋಜನೆಯ ಅಧ್ಯಕ್ಷರಿಂದ ಸಂವಾದ ಕಾರ್ಯಕ್ರಮ, ರೈತರ ಅನುಭವ ಹಂಚಿಕೆ ಮತ್ತು ಕೃಷಿ ತಜ್ಞರೊಂದಿಗೆ ಸಂವಾದ, ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮಗಳು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು.

# ರೈತರು ಅನ್ನದ ಬಟ್ಟಲು: ಕೋಳಾರು

ಮುಜುಂಗಾವು, ಡಿ. 27: ದೇಶ ಮುಂದಕ್ಕೆ ಸಾಗಿದಂತೆ ಕೃಷಿ ಕ್ಷೇತ್ರ ಹಿಂದುಳಿಯಿತು. ಕೃಷಿ ಸಂಪೂರ್ಣ ನಿರ್ಲಕ್ಷಿಸಿ ತ್ಯಜಿಸುವುದು, ವಲಸೆ ಹೋಗುವುದು ಅತ್ಯಂತ ಅಪಾಯಕಾರಿ. ಈ ಮೂಲಕ ದೇಶದ ಸಮಗ್ರ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಲಿದೆ. ದೇಶವನ್ನು ಸುಭದ್ರ ಹಾಗೂ ಸಮಗ್ರವಾದ ಅಭಿವೃದ್ಧಿಯತ್ತ ಸಾಗಿಸಬೇಕಾದರೆ, ಕೃಷಿಯಲ್ಲೂ ದೇಶದ ಸಾಧನೆಯಾಗಬೇಕು. ಕೃಷಿ ಇದ್ದರೆ ಮಾತ್ರವೇ ಬದುಕು. ಈ ಹಿನ್ನೆಲೆಯಲ್ಲಿ ರೈತರು ದೇಶದ ಅನ್ನದ ಬಟ್ಟಲು ಎಂದು ಕ್ಯಾಂಪ್ಕೋ ಉಪಾಧ್ಯಕ್ಷ ಕೋಳಾರು ಸತೀಶ್ಚಂದ್ರ ಭಂಡಾರಿ ಹೇಳಿದರು.



ಕೃಷಿ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಕರಾವಳಿ ಪ್ರದೇಶ ಅಡಿಕೆ, ಭತ್ತಕ್ಕೆ ಹೆಸರುವಾಸಿ. ಆದರೆ ಇಂದು ಅಡಿಕೆ ಮಾರುಕಟ್ಟೆ ತಲ್ಲಣಗೊಂಡಿದೆ. ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂದು ಕೆಲವು ಸಂಶೋಧಕರು ಹೇಳಿರುವುದರಿಂದ ಅಡಿಕೆ ಕೃಷಿಗೆ ಸಂಕಷ್ಟ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಅಡಿಕೆ ಕೃಷಿಯನ್ನು ಇನ್ನಷ್ಟು ವಿಸ್ತರಿಸಬೇಕಾದ ಅಗತ್ಯವಿಲ್ಲ. ಈಗ ಇರುವ ಅಡಿಕೆ ಕೃಷಿಯನ್ನು ಉಳಿಸಿಕೊಂಡರೆ ಸಾಕು. ಇಂದು ಅಡಿಕೆ ಕೃಷಿಯ ಮೇಲೆ ತೂಗುಕತ್ತಿ ತೂಗುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿಕರಿಗೆ ಆತಂಕವಾಗುವುದು ಸಹಜ. ಆ ಮಾತ್ರಕ್ಕೆ ಅಡಿಕೆ ಕೃಷಿ ಬಿಡಬೇಕೆಂದಲ್ಲ ಎಂದರು.

ಚೈನಾದಲ್ಲಿ ಅಡಿಕೆಯಿಂದ ವಿವಿಧ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಈ ಹಿನ್ನೆಲೆಯಿಂದ ಅಲ್ಲಿ ಅಡಿಕೆಗೆ ಬೇಡಿಕೆ ಇದೆ. ಆದರೆ ನಮ್ಮ ದೇಶದಲ್ಲಿ ಅಡಿಕೆ 'ಜಗಿಯುವುದು ಮತ್ತು ಉಗುಳುವುದು' ಇದರಿಂದಾಗಿ ಅಡಿಕೆ ಬೇಡಿಕೆ ಕುಸಿಯುತ್ತಿದೆ. ಇಲ್ಲೂ ವಿವಿಧ ಉತ್ಪನ್ನಗಳನ್ನು ತಯಾರಿಸಲು ಸಾಧ್ಯವಾದರೆ ಅಡಿಕೆಗೆ ಸಾಕಷ್ಟು ಬೇಡಿಕೆ ಬರಬಹುದು ಎಂದರು.

ಹೆಚ್ಚೆಚ್ಚು ಉಪಬೆಳೆಯನ್ನು ಬೆಳೆಯಬೇಕು. ಉದ್ಯೋಗ ಖಾತರಿ ಯೋಜನೆಯನ್ನು ಕೃಷಿಗೆ ಬಳಸಿಕೊಳ್ಳಬೇಕು ಮತ್ತು ಉತ್ಪಾದನಾ ಕ್ಷೇತ್ರದಲ್ಲಿ ಬಳಸಿಕೊಳ್ಳಬೇಕು. ಗದ್ದೆಗಳನ್ನು ಹಡಿಲು ಬಿಡದೆ ಕೃಷಿ ಬೆಳೆದು ಮುಂದಿನ ಪೀಳಿಗೆಗೆ ಕೃಷಿಯ ಕಲ್ಪನೆ, ಜಾಗೃತಿ ಮೂಡಿಸಬೇಕು. ಕೃಷಿ ಇಲ್ಲದಿದ್ದರೆ ದೇಶ, ಜಗತ್ತು ಉಳಿಯುವುದಿಲ್ಲ ಎಂದು ಅವರು ತಿಳಿಸಿದರು.



ಅತಿಥಿಗಳನ್ನು ಕೊಂಬು ಕಹಳೆ, ಕಂಬಳದ ಕೋಣಗಳ ಸ್ವಾಗತದೊಂದಿಗೆ ವೇದಿಕೆಗೆ ಕರೆತರಲಾಯಿತು.



ಡಾ| ಕೆ.ಬಿ. ಹೆಬ್ಬಾರ್ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಡಾ| ಮಂಜುನಾಥ್ ತರಕಾರಿ ಗಣಪನ ಕೃತಿ ಅನಾವರಣಗೊಳಿಸಿ ವಸ್ತುಪ್ರದರ್ಶನ ಉದ್ಘಾಟಿಸಿದರು.